ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಬೀದರ್ ಜಿಲ್ಲಾ ಮುದ್ರಾಂಕ ಶುಲ್ಕ ಸಂಗ್ರಹವಾದ ಅಧಿಬಾರ ಶುಲ್ಕದ ಬಗ್ಗೆ

ಶ್ರೀ ವಿಜಯ ಸಿಂಗ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

377 (451) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) 2017-18 ಹಾಗೂ 2018-19ನೇ ಸಾಲಿನ ಬೀದರ್ ಜಿಲ್ಲಾ ಮುದ್ರಾಂಕ ಸಂಗ್ರಹವಾದ ಅಧಿಬಾರ ಶುಲ್ಕದ ಮೊತ್ತವನ್ನು ನಿಧಿ-3ರಲ್ಲಿ ಜಮಾ ಮಾಡಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ಬೀದರ್ ಜಿಲ್ಲೆಯ 5 ತಾಲ್ಲೂಕು ಪಂಚಾಯತಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ವಿವಿಧ ಕಾಮಗಾರಿಗಳ ಬಿಲ್ಲುಗಳ ಪಾವತಿ ಮಾಡುವ ಸಂಬಂಧ ಸಂಗ್ರಹಿಸಲಾದ ಅಧಿಭಾರ ಮೊತ್ತವಾದ ಸುಮಾರು 3.48 ಕೋಟಿ ರೂ.ಗಳನ್ನು ಖಜಾನೆ-2 ರಿಂದ ತಾಲ್ಲೂಕು ಪಂಚಾಯತಿ ನಿಧಿ-3ಕ್ಕೆ ಜಮಾ ಮಾಡುವಂತೆ ಬೀದರ್ ಜಿಲ್ಲಾ ಪಂಚಾಯತಿಯಿಂದ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು; ಹಾಗೂ ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ? (ವಿವರಗಳೊಂದಿಗೆ ಮಾಹಿತಿ ನೀಡುವುದು)